ಉತ್ತರ

ಅ) ಸುವರ್ಣ ಕಾಯಕ ತರಬೇತಿ ಉದ್ಯೋಗ ಯೋಜನೆಯಡಿಯಲ್ಲಿ ಒಟ್ಟು ೭೧ ಅಭ್ಯರ್ಥಿಗಳಿಗೆ / ನಿರುದ್ಯೋಗಿಗಳಿಗೆ ತರಬೇತಿ ನೀಡಲಾಗುತ್ತಿದೆ./ (ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.)

ಕ್ರಮ ಸಂಖ್ಯೆ	ತಾಲ್ಲೂಕು	ಅಭ್ಯರ್ಥಿಗಳ ಸಂಖ್ಯೆ
೧	ಬಿಜಾಪುರ	೨೨
೨	ಬಸವನಬಾಗೇವಾಡಿ	೨೬
೩	ಮುದ್ದೇಬಿಹಾಳ್	೦೫
೪	ಇಂಡಿ	೧೭
೫	ಸಿಂದಗಿ	೦೧
	ಒಟ್ಟು	**೭೧**

ಆ) ಬಿಜಾಪುರ ಜಿಲ್ಲೆಯಲ್ಲಿ ಒಟ್ಟು ೬೪೨೧ ನೊಂದಾಯಿತ ಕೈಗಾರಿಕೆಗಳಿವೆ.

ಇ) ಸೂಕ್ತ ಸಂದರ್ಭದಲ್ಲಿ ಉದ್ಯೋಗ ಮೇಳವನ್ನು ಬಿಜಾಪುರದಲ್ಲಿ ಏರ್ಪಡಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೦ (೨೪೦೧)

ಸದಸ್ಯರ ಹೆಸರು : ಶ್ರೀ ಬಾಲರಾಜ್. ಎಸ್ (ಕೊಳ್ಳೇಗಾಲ)

ಉತ್ತರಿಸುವವರು : ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ವರ್ಗಾವಾರು/ ವಲಯವಾರು ವಿವರ ನೀಡುವುದು) ;

ಆ) ರೇಷ್ಮೆ ಇಲಾಖೆಯಲ್ಲಿ ಹಾಲಿ ಇರುವ ನೌಕರರ ಸಂಖ್ಯೆ ಅಗತ್ಯಕ್ಕಿಂತ ಜಾಸ್ತಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಕೆಲವು ವರ್ಗದ ಹುದ್ದೆಗಳನ್ನು ರದ್ದು ಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

ಈ) ಹಾಗಿದ್ದಲ್ಲಿ ಇದುವರೆವಿಗೂ ಎಷ್ಟು ಹುದ್ದೆಗಳನ್ನು ರದ್ದುಗೊಳಿಸಲಾಗಿದೆ ಹಾಗೂ ಈ ಬಗ್ಗೆ ಮುಂದೆ ತೆಗೆದು ಕೊಳ್ಳುವ ಕ್ರಮಗಳೇನು ?

ಉತ್ತರ

ಅ) ದಿನಾಂಕ : ೦೧-೦೩-೨೦೦೭ ರಲ್ಲಿದ್ದಂತೆ ರೇಷ್ಮೆ ಇಲಾಖೆಯ ವರ್ಗವಾರು / ವಲಯವಾರು ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ.

ಕ್ರ. ಸಂ	ವಲಯ	ಎ	ಬಿ	ಸಿ	ಡಿ	ಒಟ್ಟು
೧	ಬೆಂಗಳೂರು	೧	೩೪	೯೮	೧೧	೧೪೪
೨	ಮೈಸೂರು	೩	೩೯	೧೩೯	೮	೧೮೯
೩	ಬೆಳಗಾಂ	೧	೧೦	೨೮	೨	೪೧
೪	ಗುಲ್ಬರ್ಗಾ	೨	೫	೧೮	೩	೨೮
೫	ಬಿತ್ತನೆ ವಲಯ	–	೧೨	೮೪	೧	೯೭
	ಒಟ್ಟು	೭	೧೦೦	೩೭೭	೨೫	೪೯೯

ಆ) ಇಲಾಖೆಯಲ್ಲಿ ಅಗತ್ಯಕ್ಕಿಂತ ಜಾಸ್ತಿ ಹುದ್ದೆಗಳು ಇರುವುದಿಲ್ಲ.

ಇ) ಹುದ್ದೆಗಳನ್ನು ರದ್ದುಗೊಳಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಈ) ಹುದ್ದೆಗಳನ್ನು ರದ್ದುಗೊಳಿಸುವ ಪ್ರಸ್ತಾವನೆ ಇಲ್ಲದ ಕಾರಣ ಈ ಬಗ್ಗೆ ಮುಂದೆ ತೆಗೆದುಕೋಳುವ ಕ್ರಮ ಉದ್ಭವಿಸುವುದಿಲ್ಲ.